KABR320038722018

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ದೇವನಹಳ್ಳಿ.**

**ಸಿ.ಸಿ. ನಂ.2655/2018**

**ದಿನಾಂಕಃ 3ನೇ ಜುಲೈ 2026**

**ಉಪಸ್ಥಿತರುಃ ಶ್ರೀಮತಿ. ಚಂದ್ರಿಕಾ. ಕೆ. ಟಿ.** ಬಿಸಿಎ. ಎಲ್.ಎಲ್.ಬಿ.
ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.

**ಪಿರ್ಯಾದುದಾರರು** : ರಾಜ್ಯದ ಪರ ವಿಶ್ವಾನಥಪುರ ಪೋಲಿಸ್ ಠಾಣೆ,
**(ಸಹಾಯಕ ಸರ್ಕಾರಿ ಅಭಿಯೋಜಕರವರಿಂದ)**

**-: ವಿರುದ್ಧ :-**

**ಆರೋಪಿಗಳು** : ಎ1. ನಂಜುಂಡೆಗೌಡ ಬಿನ್ ಲೇಟ್ ಕೃಷ್ಣಪ್ಪ,
ವಯಸ್ಸುಃ 55 ವರ್ಷ,

ಎ2. ಅಶ್ವಥಗೌಡ ಬಿನ್ ಲೇಟ್ ಕೃಷ್ಣಪ್ಪ,
ವಯಸ್ಸುಃ 45 ವರ್ಷ,

ಎ3. ಮೂರ್ತಿ ಆರ್.ಕೆ ಬಿನ್ ಲೇಟ್ ಕೃಷ್ಣಪ್ಪ,
ವಯಸ್ಸುಃ 38 ವರ್ಷ,

ಎ4. ಮಂಜುನಾಥ ಬಿನ್ ಲೇಟ್ ಕೃಷ್ಣಪ್ಪ,
ವಯಸ್ಸುಃ 23 ವರ್ಷ,

ಎ5. ಶೋಭಾ ಬಿನ್ ಲೇಟ್ ಕೃಷ್ಣಪ್ಪ,
ವಯಸ್ಸುಃ 45 ವರ್ಷ,

ಎಲ್ಲರ ವಾಸ ರಾಮನಾಥಪುರ ಗ್ರಾಮ,
ಕುಂದಾಣ ಹೋಬಳಿ, ದೇವಹಳ್ಳಿ ತಾಲ್ಲೂಕ್,
ಬೆಂಗಳೂರು ಜಿಲ್ಲೆ.

**(ಶ್ರೀ. ಡಿ.ಎನ್.ಎನ್., ವಕೀಲರಿಂದ ಎ1 ರಿಂದ ಎ5)**

* * * * * * * *

| | | |
|---|---|---|
| **ಪಿರ್ಯಾದುದಾರರ ಹೆಸರು** | : | **ಶ್ರೀ. ಅಂಬುಜಮ್ಮ ಕೋಂ ಲೇಟ್ ಕೃಷ್ಣಮೂರ್ತಿ** |
| **ಆಪಾದಿಸಲಾದ ಆಪಾದನೆಗಳು** | : | **ಭಾ.ದಂ.ಸಂ. ಕಲಂ. 506, 341, 504, 143, 147, 323, 354 ಸಹವಾಚ 149** |
| **ಕೃತ್ಯ ನಡೆದ ದಿನಾಂಕ** | : | **16.04.2018** |
| **ಕೃತ್ಯ ವರದಿ ಮಾಡಿದ ದಿನಾಂಕ** | : | **16.04.2018** |
| **ಆಪಾದಿತನ ಬಂಧನ ದಿನಾಂಕ** | : | |
| **ಜಾಮೀನು ನೀಡಿದ ದಿನಾಂಕ** | : | |
| **ಆಪಾದಿತ ಬಂದನದಲ್ಲಿರುವ ದಿನಗಳು** | : | **- -** |
| **ಸಾಕ್ಷಿದಾರರ ಹೇಳಿಕೆ ಪ್ರಾರಂಭವಾದ ದಿನಾಂಕ** | : | **19.09.2025** |

**ಸಾಕ್ಷಿದಾರರ ಹೇಳಿಕೆ ಮುಕ್ತಾಯದ ದಿನಾಂಕ : 22.06.2026**

**ತೀರ್ಮಾನ ಹೊರಡಿಸುವ ದಿನಾಂಕ : 03.07.2026**

* * * * * * * *

**ತೀರ್ಪು**

ವಿಶ್ವಾನಥಪುರ ಪೊಲೀಸ್ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.506, 341, 504, 143, 147, 323, 354 ಸಹವಾಚಕ 149ರಡಿಯಲ್ಲಿ ಅಪರಾಧವೆನಿಸಲ್ಪಟ್ಟ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪರ ಮೊಕದ್ದಮೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತಿದೆ:-** ವಿಶ್ವಾನಥಪುರ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ದಿ 12.04.2018 ರಂದು ಸಂಜೆ ಸುಮಾರು 4.00 ಗಂಟೆ ಸಮಯದಲ್ಲಿ ದೇವನಹಳ್ಳಿ ತಾಲ್ಲೂಕ್, ಕುಂದಾಣ ಹೋಬಳಿ, ರಾಮನಾಥಪುರ ಗ್ರಾಮದ ಸರ್ವೆ ನಂ.13/3 ಜಮೀನಿನ ಹತ್ತಿರ ಸಾಕ್ಷಿ 1 ರಿಂದ ಸಾಕ್ಷಿ 3 ರವರು ಜಮೀನಿನ ಹತ್ತಿರ ಹೋದಾಗ, ಈ ದೋಷಾರೋಪಣ ಅಂಕಣ 12ರಲ್ಲಿ ಕಂಡ ಆರೋಪಿಗಳು ಅಕ್ರಮ ಗುಂಪು ಕಟ್ಟಿಕೊಂಡು, ಸಾಕ್ಷಿ-1 ರಿಂದ ಸಾಕ್ಷಿ-3 ವರೆಗಿನ ಸಾಕ್ಷಿದಾರರನ್ನು ಅಡ್ಡಗಟ್ಟಿ ತಡೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ಬಗಳಿಂದ ಬೈಯ್ದು 1ನೇ ಆರೋಪಿ ರವರು ಸಾಕ್ಷಿ-1 ರವರಿಗೆ ಕೈಯಿಂದ ಹೊಡೆದು, ರೆಟ್ಟೆಯನ್ನು ಹಿಡಿದು ಎಳೆದಾಡಿ ಜಮೀನಿನ ಆಚೆ ಹೋಗು ಸೂಳೆ ಮುಂಡೆ ಎಂದು ತಳ್ಳಿರುತ್ತಾರೆ. 2ನೇ ಆರೋಪಿ ರವರು ಸಾಕ್ಷಿ-2 ರವರಿಗೆ ಕೈಯಿಂದ ಹೊಡೆದು ಜಮೀನಿನಿಂದ ಆಚೆ ತಳ್ಳಿರುತ್ತಾರೆ. 3 ರಿಂದ 5ನೇ ಆರೋಪಿಗಳು ಸಾಕ್ಷಿ-3 ರವರಿಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ. 1 ರಿಂದ 5ನೇ ಆರೋಪಿಯವರು ಸೇರಿ ಸಾಕ್ಷಿ-1, 2 ಮತ್ತು 3 ರವರಿಗೆ ಇನ್ನೊಂದು ಸಾರಿ ಈ ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಇಲ್ಲಿ ಹೂತು ಬಿಡುತ್ತೇನೇ ಅಂತ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಹಾಗೂ ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಲಿಖಿತ ದೂರನ್ನು ನೀಡಿದ್ದಾಗಿರುತ್ತದೆ.

**3.** ಆರೋಪಿಗಳು ವಕೀಲರ ಮುಖಾಂತರ ಹಾಜರಾಗಿ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು, ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ಆರೋಪಿಗಳಿಗೆ ಅವರ ವಿರುದ್ಧವಿರುವ ದೋಷಾರೋಪಣೆ ಪಟ್ಟಿಯ ನಕಲನ್ನು ನೀಡಲಾಗಿದೆ. ಆರೋಪಿಗಳ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಓದಿ ವಿವರಿಸಿ ಹೇಳಲಾಗಿ ಆರೋಪಿಗಳು ತಾವು ಯಾವುದೇ ತಪ್ಪು ಮಾಡಿಲ್ಲವೆಂದೂ ಹಾಗೂ ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ಸಾಕ್ಷಿಗಳ ವಿಚಾರಣೆಗಾಗಿ ಪ್ರಕರಣವನ್ನು ನಿಗದಿಪಡಿಸಲಾಯಿತು.

**4.** ಅಭಿಯೋಜನೆಯ ಪರ ಹಾಜರುಪಡಿಸಿದ ಸಾಕ್ಷ್ಯಿಗಳ ವಿಚಾರಣೆಯಲ್ಲಿ ಚಾಸಾ.1ರವರನ್ನು ಪ್ರಾಸಾ.1ಎಂದು ಸಾಕ್ಷ್ಯ ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಚಾಸಾ.1 ರವರು ಈ ಕೇಸಿನ ಪಿರ್ಯಾದುದಾರರು ಆಗಿರುತ್ತಾರೆ. ಪ್ರಾ.ಸಾ.2 ಮತ್ತು ಪ್ರಾ.ಸಾ.3 ಹಾಗೂ ಈ ಪ್ರಕರಣದ ಸಾಕ್ಷಿಗಳಾಗಿರುತ್ತಾರೆ ಎಂಬುದು ಅಭಿಯೋಜನೆಯವರ ನಿಲುವಾಗಿರುತ್ತದೆ. ಅಭಿಯೋಜನೆಯ ಪರ ನಾಲ್ಕು ದಾಖಲೆಗಳನ್ನು ನಿಪಿ.1 ರಿಂದ ನಿಪಿ.4 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಸದರಿ ಮೊಕದ್ದಮೆಯಲ್ಲಿ ಪ್ರಾಸಾ.1 ರಿಂದ ಪ್ರಾ.ಸಾ.3 ರವರು ಪ್ರಮುಖ ಸಾಕ್ಷಿಗಳಾಗಿದ್ದು ಅವರು ಅಭಿಯೋಜನೆಯ ವಿರುದ್ಧ ಸಾಕ್ಷ್ಯಾ ನೀಡಿದ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲ್ಪಟ್ಟಿರುತ್ತದೆ ಹಾಗಾಗಿ ಉಳಿದ ಸಾಕ್ಷಿಗಳ ಸಾಕ್ಷ್ಯಾ ಮುಖ್ಯವಾಗಿರುವುದಿಲ್ಲ. ಆದ್ದರಿಂದ ಉಳಿದ ಸಾಕ್ಷಿಗಳಿಗೆ ಸಮನ್ಸ್ ನೀಡಬೇಕೆಂಬ ಅಭಿಯೋಜನೆಯ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ಸಾಕ್ಷಿಗಳ ಸಾಕ್ಷ್ಯದಲ್ಲಿ ಆರೋಪಿಗಳ ವಿರುದ್ಧ ಇರುವ ಆಪಾದನೆಯನ್ನು ಸಾಭಿತು ಪಡಿಸಲು ಯಾವುದೇ ಸಾಕ್ಷಿಯು ಇಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರ ಕೆಳಗೆ ಆರೋಪಿಗಳ ಹೇಳಿಕೆಯನ್ನು ಪಡೆಯುವ ಪ್ರಕ್ರಿಯೆಯನ್ನು ಮನ್ನಾ ಮಾಡಲಾಗಿರುತ್ತದೆ.

**6.** ಆರೋಪಿಗಳು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**7.** ಸಹಾಯಕ ಸರ್ಕಾರಿ ಅಭೀಯೋಜಕರ ಹಾಗೂ ಆರೋಪಿಗಳ ಪರ ವಕೀಲರ ವಾದವನ್ನು ಕೇಳಿರುತ್ತೇನೆ. ಹಾಜರುಪಡಿಸಿದ ದಾಲಾತಿಗಳನ್ನು ಪರಿಶೀಲಿಸಿರುತ್ತೇನೆ.

**8. ಈ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳ:-**

1. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಆರೋಪಿಗಳು ಸಮಾನ ಉದ್ದೇಶದಿಂದ ದಿ 12.04.2018 ರಂದು ಸಂಜೆ ಸುಮಾರು 4.00 ಗಂಟೆ ಸಮಯದಲ್ಲಿ. ವಿಶ್ವಾಥಪುರ ಪೋಲಿಸ್ ಠಾಣಾ ಸರಹದ್ದು, ರಾಮನಾಥಪುರ ಗ್ರಾಮದ ಸರ್ವೆ ನಂ.13/3 ಜಮೀನಿನ ಹತ್ತಿರ ಚಾಸಾ-1 ರಿಂದ 3 ರವರು ಜಮೀನಿನ ಹತ್ತಿರ ಹೋದಾಗ 1 ರಿಂದ 5ನೇ ಆರೋಪಿಗಳು ಏಕೋದ್ದೇಶದಿಂದ, ಅಕ್ರಮ ಗುಂಪು ಕಟ್ಟಿಕೊಂಡು ಬಂದಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.143 ಸಹವಾಚಕ ಕಲಂ 149 ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

2. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 5ನೇ ಆರೋಪಿಗಳಾದ ಅಪರಾಧ ಮಾಡುವ ಏಕೋದ್ದಶದಿಂದ, ರಾಮನಾಥಪುರ ಗ್ರಾಮದ ಸರ್ವೆ ನಂ.13/3 ಜಮೀನಿನ ಹತ್ತಿರ ಚಾಸಾ-1 ರಿಂದ 3 ರವರು ಜಮೀನಿನ ಹತ್ತಿರ ಹೋದಾಗ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಅಡ್ಡಗಟ್ಟಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.341 ಸಹವಾಚಕ ಕಲಂ 149ರಡಿಯಲ್ಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

3. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ

ಸಮಯದಂದು 1 ರಿಂದ 5ನೇ ಆರೋಪಿಗಳಾದ ಅಪರಾಧ ಮಾಡುವ ಏಕೋದ್ದಶದಿಂದ, ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಉಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.147 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

4. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 5ನೇ ಆರೋಪಿಗಳಾದ ಅಪರಾಧ ಮಾಡುವ ಏಕೋದ್ದೇಶದಿಂದ, ನಿಮ್ಮ ಪೈಕಿ 1ನೇ ಆರೋಪಿಯಾದ ಚಾಸಾ-1 ರವರಿಗೆ ಕೈಯಿಂದ ಹೊಡೆದು, ರಟ್ಟೆಯನ್ನು ಹಿಡಿದು ಎಳೆದಾಡಿದ್ದು, 2ನೇ ಆರೋಪಿಯಾದ ಚಾಸಾ-2 ರವರಿನ್ನು ಕೈಯಿಂದ ಹೊಡೆದಿದ್ದು ಮತ್ತು ನಿಮ್ಮ ಪೈಕಿ 3 ರಿಂದ 5ನೇ ಆರೋಪಿಗಳಾದ ಚಾಸಾ-3 ರವರಿಗೆ ಕೈಯಿಂದ ಹೊಡೆದು ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತೀರಿ, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.323 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

5. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 5ನೇ ಆರೋಪಿಗಳಾದ ಅಪರಾಧ ಮಾಡುವ ಏಕೋದ್ದೇಶದಿಂದ, ನಿಮ್ಮ ಪೈಕಿ 1ನೇ ಆರೋಪಿಯಾದ ಚಾಸಾ-1(ಅಂಬುಜಮ್ಮ)ರವರ ರಟ್ಟೆಯನ್ನು ಹಿಡಿದು ಎಳೆದಾಡಿ ಜಮೀನಿನಿಂದ ಆಚೆ ಹೋಡು ಸೂಳೆ ಮುಂಡೆ ಎಂದು ತಳ್ಳಿ ಅವಮಾನಗೊಳಿಸಿರುತ್ತೀರಿ, ಆ ಮೂಲಕ ಭಾರತೀಯ ದಂಡ

ಸಂಹಿಂತೆಯ ಕಲಂ.354 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

6. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 5ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ, ಚಾಸಾ-1 ಮತ್ತು 3 ರವರನ್ನು ಅಡಗಟ್ಟಿ ತಡೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.504 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

7. ಅಭಿಯೋಜನೆಯವರು ತಾನು ಪ್ರತಿಪಾದಿಸಿದಂತೆ ಸಂಶಯಾತೀತವಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು 1 ರಿಂದ 5ನೇ ಆರೋಪಿಗಳು ಅಪರಾಧ ಮಾಡುವ ಏಕೋದ್ದೇಶದಿಂದ, ಚಾಸಾ-1 ಮತ್ತು 3 ರವರಿಗೆ ಇನ್ನೊಂದು ಸಾರಿ ಈ ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಇಲ್ಲಿ ಹೂತು ಬಿಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು, ಆ ಮೂಲಕ ಭಾರತೀಯ ದಂಡ ಸಂಹಿಂತೆಯ ಕಲಂ.506 ಸಹವಾಚಕ ಕಲಂ 149ರಡಿಯಲ್ಲಿ ಅಪರಾಧವೆಸಗಿದ್ದಿರೆಂದು ರುಜುವಾತುಪಡಿಸಿರುತ್ತಾರೆಯೇ?

8. ಈ ಬಗ್ಗೆ ಆದೇಶವೇನು?

**9.** ಈ ಕೆಳಕಂಡ ಕಾರಣಗಳಿಂದಾಗಿ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತವೆ.

ಅಂಶ 1 ರಿಂದ 7 : **ನಕಾರಾತ್ಮಕವಾಗಿ**

ಅಂಶ 8 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ:-

**ಕಾರಣಗಳು**

**10. ಅಂಶ 1 ರಿಂದ 7:-** ಈ ಅಂಶಗಳು ಒಂದಕ್ಕೊಂದು ಪೂರಕರವಾಗಿರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**11.** ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ. 506, 341, 504, 143, 147, 323, 354 ಸಹವಾಚಕ ಕಲಂ 149 ರ ಕೆಳಗೆ ಅಪರಾಧವೆಸಗಿರುವ ಕುರಿತು ದೋಷಾರೋಪಣೆ ಇದ್ದು, ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತಮ್ಮ ಪರ ಸಾಕ್ಷ್ಯ ವಿಚಾರಣೆಗಾಗಿ ಪಿರ್ಯಾದುದಾರರನ್ನು ಹಾಜರುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

**12.** ಈ ಪ್ರಕಣರದಲ್ಲಿ ಪಿರ್ಯಾದುದಾರರಾದ ಚಾಸಾ.1 ಅಂಬುಜಮ್ಮ ರವರನ್ನು ಪ್ರಾಸಾ.1 ರವರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಅವರು ನಮ್ಮ ಸಂಬಂಧಿಕರು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಕೆಲವು ಕಾಗದ ಪತ್ರಗಳಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದೀರಾ. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು. ನಿಪಿ-2 ರಲ್ಲಿ ಎಲ್ಲಿ ಯಾವಾಗ ಮತ್ತು ಏಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

**13.** ಈ ಹಂತದಲ್ಲಿ ಮಾನ್ಯ ಸಹಾಯಕ ಅಭಿಯೋಜಕರು ಪ್ರಾಸಾ.1 ರವರು ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಿದ ನಂತರ ಮಾನ್ಯ ಸಹಾಯಕ

ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಯನ್ನು ಪ್ರಾಸಾ.1 ರವರು ನಿರಾಕರಿಸಿರುತ್ತಾರೆ.

**14.** ಪ್ರಾಸಾ.1 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.1 ರವರು ನಿಪಿ.1 ದೂರು ಹಾಗೂ ನಿಪಿ.2 ಮಹಜರ್ ಎಲ್ಲಾ ಹೇಳಿಕೆಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಸ್ಪಷ್ಟವಾಗಿರುತ್ತದೆ. ಅಭಿಯೋಜನೆಯವರು ಅತ್ಯಂತ ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರವರು ಅಭಿಯೋಜನೆಯವರ ಪ್ರಕರಣವನ್ನೇ ಸಂಪೂರ್ಣ ನಿರಾಕರಿಸಿದ್ದು ಪ್ರತಿಕೂಲ ಸಾಕ್ಷ್ಯವಾಗುವ ಮುಖಾಂತರ ಅಭಿಯೋಜನೆಯವರಿಗೆ ಯಾವುದೇ ಸಹಕಾರವನ್ನು ನೀಡಿರುವುದಿಲ್ಲ.

**15.** ಈ ಪ್ರಕಣರದಲ್ಲಿ ಪ್ರತ್ಯಕ್ಷ ಸಾಕ್ಷಿ ಚಾಸಾ.3 ನಂಜೆಗೌಡ ರವರನ್ನು ಪ್ರಾಸಾ.2 ರವರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ.2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿಗಳಿಂದ ನನಗೆ ಯಾವುದೇ ಹಲ್ಲೆ ಆಗಿಲ್ಲ. ಈ ಸಂಬಂಧ ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಗಳು ಕೈಯಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ, ಗುದ್ದಿಲ್ಲ ಮತ್ತು ನಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿಗಳು ನಮಗೆ ಯಾವುದೇ ಪೆಟ್ಟು ಮಾಡಿರುವುದಿಲ್ಲ. ಆರೋಪಿಗಳು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳು ಗುಂಪು ಕಟ್ಟಿ ಕೊಂಡು ಬಂದು ದೊಂಬಿ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

**16.** ಈ ಹಂತದಲ್ಲಿ ಮಾನ್ಯ ಸಹಾಯಕ ಅಭಿಯೋಜಕರು ಪ್ರಾಸಾ.2 ರವರು ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಿದ ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಯನ್ನು ಪ್ರಾಸಾ.2 ರವರು ಅಲ್ಲಗಳೆದಿದ್ದಾರೆ. ಅಭಿಯೋಜನೆಯು ಅವರ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಿ ಕೊಂಡಿರುತ್ತದೆ.

**17.** ಪ್ರಾಸಾ.2 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.2 ನಿಪಿ.3 ರಲ್ಲಿರುವ ಎಲ್ಲಾ ಹೇಳಿಕೆಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಸ್ಪಷ್ಟವಾಗಿರುತ್ತದೆ. ಪ್ರಾಸಾ.2 ರವರು ಅಭಿಯೋಜನೆಯವರ ಪ್ರಕರಣವನ್ನೇ ಸಂಪೂರ್ಣ ನಿರಾಕರಿಸಿದ್ದು ಪ್ರತಿಕೂಲ ಸಾಕ್ಷ್ಯವಾಗುವ ಮುಖಾಂತರ ಅಭಿಯೋಜನೆಯವರಿಗೆ ಯಾವುದೇ ಸಹಕಾರವನ್ನು ನೀಡಿರುವುದಿಲ್ಲ.

**18.** ಈ ಪ್ರಕಣರದಲ್ಲಿ ಪ್ರತ್ಯಕ್ಷ ಸಾಕ್ಷಿ ಚಾಸಾ.2 ಮಂಜುಳಾ ರವರನ್ನು ಪ್ರಾಸಾ.3 ರವರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ.3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿಗಳಿಂದ ನನಗೆ ಯಾವುದೇ ಹಲ್ಲೆ ಆಗಿಲ್ಲ. ಈ ಸಂಬಂಧ ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಗಳು ಕೈಯಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ, ಗುದ್ದಿಲ್ಲ ಮತ್ತು ನಮ್ಮ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿಗಳು ನಮಗೆ ಯಾವುದೇ ಪೆಟ್ಟು ಮಾಡಿರುವುದಿಲ್ಲ. ಆರೋಪಿಗಳು ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳು ಗುಂಪು ಕಟ್ಟಿ ಕೊಂಡು ಬಂದು ದೊಂಬಿ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

**19.** ಈ ಹಂತದಲ್ಲಿ ಮಾನ್ಯ ಸಹಾಯಕ ಅಭಿಯೋಜಕರು ಪ್ರಾಸಾ.3 ರವರು ತನ್ನ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಿದ ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಯನ್ನು ಪ್ರಾಸಾ.3 ರವರು ಅಲ್ಲಗಳೆದಿದ್ದಾರೆ. ಅಭಿಯೋಜನೆಯು ಅವರ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಿ ಕೊಂಡಿರುತ್ತದೆ.

**20.** ಪ್ರಾಸಾ.3 ರವರ ಈ ಮೇಲಿನ ಸಾಕ್ಷ್ಯ ಹೇಳಿಕೆಗಳನ್ನು ಗಮನಿಸಿದಾಗ ಪ್ರಾಸಾ.3 ನಿಪಿ.4 ರಲ್ಲಿರುವ ಎಲ್ಲಾ ಹೇಳಿಕೆಗಳಿಗೆ ಸಂಪೂರ್ಣ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು

ಸ್ಪಷ್ಟವಾಗಿರುತ್ತದೆ. ಪ್ರಾಸಾ.3 ರವರು ಅಭಿಯೋಜನೆಯವರ ಪ್ರಕರಣವನ್ನೇ ಸಂಪೂರ್ಣ ನಿರಾಕರಿಸಿದ್ದು ಪ್ರತಿಕೂಲ ಸಾಕ್ಷ್ಯವಾಗುವ ಮುಖಾಂತರ ಅಭಿಯೋಜನೆಯವರಿಗೆ ಯಾವುದೇ ಸಹಕಾರವನ್ನು ನೀಡಿರುವುದಿಲ್ಲ.

**21.** ಈ ಪ್ರಕರಣದಲ್ಲಿ ಪಿರ್ಯಾದುದಾರರಾದ ಪ್ರಾಸಾ.1 ಹಾಗೂ ಪ್ರತ್ಯಕ್ಷ ಸಾಕ್ಷಿಗಳಾದ ಪ್ರಾಸಾ.2 ಮತ್ತು ಪ್ರಾಸಾ.3 ರವರು ಅಭಿಯೋಜನೆಯವರ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಇತರ ಸಾಕ್ಷಿದಾರರಿಗೆ ಸಮನ್ಸ್ ಜಾರಿ ಮಾಡುವ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಪ್ರಾಸಾ.1 ರಿಂದು ಪ್ರಾಸಾ.3 ರವರ ಸಾಕ್ಷಿ ಹೇಳಿಕೆಯನ್ನು ಗಮನಿಸಿದಾಗ ಅವರು ಆರೋಪಿಗಳೊಂದಿಗೆ ರಾಜೀ ಮಾಡಿಕೊಂಡಿರುವುದು ಕಂಡು ಬರುತ್ತದೆ. ಆದ್ದರಿಂದ ಅಭಿಯೋಜನೆಯವರು ಆರೋಪಿಗಳ ಮೇಲೆ ಆಪಾದಿಸಿದಂತೆ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಆರೋಪಿಗಳ ವಿರುದ್ಧ ಆಪಾದಿಸಲಾದ ಆಪಾದನೆಗಳನ್ನು ಪುಷ್ಟಿಕರಿಸುವ ಸಾಕ್ಷ್ಯವು ನ್ಯಾಯಾಲಯದ ಮುಂದೆ ಲಭ್ಯವಿಲ್ಲದ ಕಾರಣ ಸಂಶಯ ಲಾಭವನ್ನು ಪಡೆಯಲು ಆರೋಪಿಗಳು ಅರ್ಹರಾಗಿದ್ದಾರೆಂದು ನ್ಯಾಯಾಲಯವು ಪರಗಣಿಸುತ್ತಾ 1 ರಿಂದ 7 ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

**22**. **ಅಂಶ 8:-** ಈ ಮೇಲ್ಕಂಡ ಕಾರಣಗಳಿಂದಾಗಿ, ನಾನು ಈ ಅಂಶವನ್ನು ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

ಆರೋಪಿಗಳ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆಯ ಕಲಂ. 143, 341, 147, 323, 354, 504, 506, ಸಹವಾಚಕ ಕಲಂ 149 ರಡಿಯಲ್ಲಿನ ದೋಷಾರೋಪಣೆಗಳಿಂದ ನಿರ್ದೋಷಿಗಳೆಂದು ತೀರ್ಮಾನಿಸಿ, ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಆರೋಪಿಗಳು ಹಾಗೂ ಅವರ ಜಾಮೀನುದಾರರ ಮುಚ್ಚಳಿಕೆ ಪತ್ರವು ಸಿ.ಆರ್.ಪಿ.ಸಿ. ತಿದ್ದುಪಡಿ ಕಾಯ್ದೆ ಕಲಂ.437ಎ ರಡಿಯಲ್ಲಿ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ನೀಡಿ, ಬೆರಳಚ್ಚು ಮಾಡಿದ್ದು, ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ, ಮುಕ್ತ ನ್ಯಾಯಾಲಯದಲ್ಲಿ ತೀರ್ಪನ್ನು **ದಿನಾಂಕಃ 3ನೇ ಜುಲೈ 2026** ರಂದು ಘೋಷಿಸಲಾಯಿತು)

**(ಚಂದ್ರಿಕಾ. ಕೆ. ಟಿ.)**
**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವನಹಳ್ಳಿ.**

## ಅನುಬಂಧ

**ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳು:-**

ಪ್ರಾಸಾ.1 - ಅಂಬುಜಮ್ಮ
ಪ್ರಾಸಾ.2 - ನಂಜೇಗೌಡ
ಪ್ರಾಸಾ.3 - ಮಂಜುಳಾ

**ಅಭಿಯೋಜನೆಯ ಪರ ದಾಖಲಿಸಲ್ಪಟ್ಟ ದಾಖಲೆಗಳು:-**

| | | |
|---|---|---|
| ನಿಪಿ.1 | : | ದೂರು |
| ನಿಪಿ.1(ಎ) | : | ಪ್ರಾಸಾ.1 ರವರ ಸಹಿ |
| ನಿಪಿ.2 | : | ಪಂಚನಾಮೆ |
| ನಿಪಿ.2(ಎ) | : | ಪ್ರಾಸಾ.1 ರವರ ಸಹಿ |
| ನಿಪಿ.3 | : | ಹೇಳಿಕೆ |
| ನಿಪಿ.4 | : | ಹೇಳಿಕೆ |

**ಅಭಿಯೋಜನೆಯ ಪರ ವಿಚಾರಣೆಯಲ್ಲಿ ಗುರುತಿಸಲ್ಪಟ್ಟ ಮುದ್ದೆಮಾಲುಗಳು:-**

**- ಇಲ್ಲ -**

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳು:-**

**- ಇಲ್ಲ -**

**ಆರೋಪಿತರ ಪರ ದಾಖಲಿಸಲ್ಪಟ್ಟ ದಾಖಲೆಗಳು:-**

**- ಇಲ್ಲ -**

(ಚಂದ್ರಿಕಾ. ಕೆ. ಟಿ.)

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ.